ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಅಲ್ಲಿ ಬಸ್ ನಿಲ್ದಾಣಕ್ಕೆ ಇರುವ ಸ್ಥಳಾವಕಾಶ ಕಡಿಮೆ ಇದೆಯೆಂದು ಗಮನಿಸಲಾಗಿದೆ. ಅಲ್ಲಿ ಸುಮಾರು 200 ಚದರ ಮೀಟರ್‌ನಷ್ಟು ವಿಸ್ತಾರಗೊಳಿಸಲು ಈ ಹಣವನ್ನು ಖರ್ಚು ಮಾಡಬೇಕೆಂದಿದ್ದೇವೆ. ರಸ್ತೆ, ಶೆಲ್ಟರ್, ಬಸ್ ಸ್ಟ್ಯಾಂಡ್‌ನಲ್ಲಿ ಮೂಲಭೂತವಾಗಿ ಏನೇನು ಇರಬೇಕೋ ಅವೆಲ್ಲವನ್ನೂ ಮಾಡುವುದಕ್ಕೆ ಹಣವನ್ನು ಖರ್ಚು ಮಾಡಲು ಉದ್ದೇಶಿಸಿದ್ದೇವೆ.

ಶ್ರೀ ಚಿಮ್ಮನಕಟ್ಟಿ ಬಾಳಪ್ಪ ವೀರಪ್ಪ :— ಬಾದಾಮಿಯು ಐತಿಹಾಸಿಕವಾದ ಸ್ಥಳ. ಪ್ರವಾಸಿಗರ ಸಂಖ್ಯೆ ಜಾಸ್ತಿಯಾಗಿರುತ್ತದೆ. ಬಸ್ ಸ್ಟ್ಯಾಂಡ್‌ನಲ್ಲಿ ಶೆಲ್ಟರ್ ಇಲ್ಲದಿರುವುದರಿಂದ ಬಿಸಿಲಿನ ತಾಪದಿಂದ ಪ್ರಯಾಣಿಕರಿಗೆ ತೊಂದರೆ ಇದೆ. ಅಲ್ಲಿ ಈಗಾಗಲೇ ದೊಡ್ಡ ಕಟ್ಟೆಯನ್ನು ಕಟ್ಟಿದ್ದಾರೆ. ಅದಕ್ಕೆ ಮೇಲ್ಚಾವಣಿ ಕಟ್ಟಿದರೆ ನೆರಳು ಬರುತ್ತದೆ. ಇದರಿಂದ ಪ್ರಯಾಣಿಕರಿಗೆ ಅನುಕೂಲವಾಗುತ್ತದೆ. ಆ ಮೇಲ್ಚಾವಣಿ ಮಾಡಲು ಬಹಳ ಖರ್ಚು ಆಗುವುದಿಲ್ಲ. ಎರಡು ಮೂರು ಲಕ್ಷ ರೂ.ವಾಗಬಹುದು. ದಯವಿಟ್ಟು ತಾವು ಆ ಕೆಲಸವನ್ನು ಮಾಡಲು ಒಪ್ಪಿದರೆ ದೊಡ್ಡ ಸಹಾಯ ಮಾಡಿದಂತಾಗುತ್ತದೆ.

ಶ್ರೀ ಸಿ. ಬೈರೇಗೌಡ :— ಅಲ್ಲಿ ಬಸ್ ಟ್ರಿಪ್‌ಗಳು ಸುಮಾರು 250 ದಿನನಿತ್ಯ ಇದೆ. ಬಸ್ ಸ್ಟ್ಯಾಂಡ್‌ನಲ್ಲಿ ಮೇಲ್ಚಾವಣಿ ಇರಬೇಕಾದುದು ಅವಶ್ಯಕವಾಗಿರುತ್ತದೆ. ಮೇಲ್ಚಾವಣಿಯೇ ಇಲ್ಲದಿರುವುದು ಬಸ್ ಸ್ಟ್ಯಾಂಡ್ ಹೇಗೆ ಆಗುತ್ತದೆ? ಆ ಕೆಲಸವನ್ನು ಮಾಡುವ ಪ್ರಯತ್ನವನ್ನು ಸಂಸ್ಥೆಯವರು ಮಾಡುತ್ತಾರೆಂದು ಹೇಳಬಯಸುತ್ತೇನೆ.

ಶ್ರೀ ಚಿಮ್ಮನಕಟ್ಟಿ ಬಾಳಪ್ಪ ಭೀಮಪ್ಪ :— ಬಾದಾಮಿ, ಪಟ್ಟದಕಲ್ಲು, ಐಹೊಳೆಗಳು ಐತಿಹಾಸಿಕವಾಗಿ ಬಹಳ ಪ್ರಸಿದ್ಧವಾದ ಸ್ಥಳಗಳು. ಇಂಥ ಸ್ಥಳಗಳನ್ನು ನೋಡಲು ಬೆಂಗಳೂರಿನಿಂದ ಬರಲು ಬಸ್‌ಗಳ ಸೌಲಭ್ಯ ಇರುವುದಿಲ್ಲ. ಆದ್ದರಿಂದ ಬೆಂಗಳೂರಿನಿಂದ ಒಂದು ಸೂಪರ್ ಡೀಲಕ್ಸ್ ಬಸ್ಸನ್ನು ಬಿಟ್ಟರೆ ಅನುಕೂಲವಾಗುತ್ತದೆ.

ಅಧ್ಯಕ್ಷರು :— ಸಂಬಂಧಪಟ್ಟ ಸಚಿವರು ಇಲ್ಲ. ಅವರ ಪರವಾಗಿ ಬೈರೇಗೌಡರು ಉತ್ತರ ಕೊಡುತ್ತಿದ್ದಾರೆ. ಆದ್ದರಿಂದ ಸಾರಿಗೆ ಸಚಿವರಾದ ಬಚ್ಚೇಗೌಡರು ಬಂದಮೇಲೆ ನಾವುಗಳು ಕುಳಿತುಕೊಂಡು ಮಾತನಾಡೋಣ. ಅಲ್ಲಿಗೆ ಬೆಂಗಳೂರಿನಿಂದ ಸೂಪರ್ ಡೀಲಕ್ಸ್ ಬಸ್ಸನ್ನು ಹಾಕಿಸುವ ಏರ್ಪಾಡು ಮಾಡೋಣ.

ಚಿಕ್ಕಮಗಳೂರಿನಲ್ಲಿ ಕರ್ನಾಟಕ ಗೃಹಮಂಡಳಿಯ ನಿರ್ಮಿಸಿರುವ ಮನೆಗಳು.

186 (853) ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕಮಗಳೂರು ಕ್ಷೇತ್ರದ ನಗರಸಭೆಯ ವ್ಯಾಪ್ತಿಯಲ್ಲಿ ಕರ್ನಾಟಕ ಗೃಹಮಂಡಳಿಯಿಂದ ನಿರ್ಮಿಸಿರುವ ಮನೆಗಳ ಸಂಖ್ಯೆ ಎಷ್ಟು ;

ಅ) ನಿರ್ಮಿಸಿರುವ ಮನೆಗಳ ಪ್ರಸ್ತುತ ಸಾಲಿನವರೆಗೆ ವೆಚ್ಚವಾಗಿರುವ ಹಣ ಎಷ್ಟು;

ಇ) ಕರ್ನಾಟಕ ಗೃಹಮಂಡಳಿ ವತಿಯಿಂದ ನಿರ್ಮಿಸಿರುವ ಈ ಬಡಾವಣೆಗೆ ಕುಡಿಯುವ ನೀರಿನ ಪೂರೈಕೆ ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆಯೇ;

ಈ) ನಾಗರೀಕ ಸವಲತ್ತು ಆಗದೇ ಇದ್ದಲ್ಲಿ ಅದನ್ನು ಪೂರೈಸಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮವೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಒಟ್ಟು 803 ಮನೆಗಳನ್ನು ನಿರ್ಮಿಸಲಾಗಿದೆ.

ಆ) ಒಟ್ಟು ರೂ. 529.37 ಲಕ್ಷಗಳು ಖರ್ಚು ಮಾಡಲಾಗಿದೆ.

ಇ) ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಒಳಚರಂಡಿ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ಇದಕ್ಕೆ ಬದಲಾಗಿ ಪ್ರತಿ ಮನೆಗೆ ಪಿಟ್ ತೆಗೆದು ಶೌಚಾಲಯಕ್ಕೆ ಸಂಪರ್ಕ ಕಲ್ಪಿಸಲಾಗಿದೆ.

ಈ) ನಾಗರೀಕ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಮೊದಲ ಬಾರಿಗೆ ನನ್ನ ಪ್ರಶ್ನೆ ಬಂದಿದೆ. ವಸತಿ ಸಚಿವರೇ ಈ ಸದನದಲ್ಲಿ ಇಲ್ಲ, ಅವರ ಪರವಾಗಿ ಮಾತನಾಡಲು ಬೇರೆ ಸಚಿವರು ಎದ್ದು ನಿಂತಿದ್ದಾರೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಕರ್ನಾಟಕ ಗೃಹಮಂಡಳಿಯಿಂದ ಸುಮಾರು 803 ಮನೆಗಳನ್ನು ಕಟ್ಟಿದ್ದಾರೆ. ಅದರ ಜೊತೆಗೆ ಖಾಲಿ ನಿವೇಶನಗಳನ್ನು ಮಾಡತಕ್ಕ ಪ್ರಯತ್ನ ಸರ್ಕಾರ ಮತ್ತು ಈ ಮಂಡಳಿಯಿಂದ ಆಗುತ್ತಿದೆ. ಅಲ್ಲಿ ವಾಸಿಸುತ್ತಿರುವ ನಾಗರೀಕರಿಗೆ ಕುಡಿಯುವ ನೀರನ್ನು ಒದಗಿಸಿದ್ದೀರಾ ಎಂಬ ನನ್ನ ಮುಖ್ಯವಾದ ಪ್ರಶ್ನೆಗೆ ಅವರು ಹೌದು ಎಂದು ಹೇಳಿದ್ದಾರೆ. ಯಾವ ಮೂಲದಿಂದ ನೀರನ್ನು ಒದಗಿಸಲಾಗಿದೆ ಎಂಬ ಬಗ್ಗೆ ಸರ್ಕಾರ ಇದುವರೆಗೆ ಯೋಚನೆ ಮಾಡಿದೆಯೆ? ಒಳಚರಂಡಿ ಸೌಲಭ್ಯವನ್ನು ಕಲ್ಪಿಸಲಾಗಿದೆಯೆ ಎಂದು ಕೇಳಿದ್ದಕ್ಕೆ ಪಿಟ್‌ನ್ನು ತೆಗೆದು ಶೌಚಾಲಯಕ್ಕೆ ಸಂಪರ್ಕವನ್ನು ಕಲ್ಪಿಸಲಾಗಿದೆಯೆಂದು ಉತ್ತರ ನೀಡಿದ್ದಾರೆ. ಕಾರ್ಯಕ್ರಮವನ್ನು ರೂಪಿಸುವ ಸರ್ಕಾರದವರೇ ಗ್ರೌಂಡ್ ವಾಟರ್‌ಗೆ ತೊಂದರೆಯಾಗುತ್ತದೆ ಎಂಬ ಬಗ್ಗೆ ಯೋಚನೆ ಮಾಡದಿದ್ದರೆ ಹೇಗೆ? ಪಿಟ್ ತೆಗೆಯುವ ಮೂಲಕ ಈ ವ್ಯವಸ್ಥೆ ಮಾಡಿದ್ದೇವೆಂದರೆ ಸರ್ಕಾರ ಇದರ ಬಗ್ಗೆ ಯಾವ ಮಟ್ಟದಲ್ಲಿ ಚಿಂತನೆ ಮಾಡಿದೆ ಎಂದು ಕೇಳಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಜವಳಿ ಸಚಿವರು) (ನಗರಾಭಿವೃದ್ಧಿ ಸಚಿವರ ಪರವಾಗಿ) :— ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಕೊಳವೆ ಬಾವಿಗಳ ಮೂಲಕ ಮಾಡಲಾಗಿದೆ. ಮೂಲ ಯೋಜನೆಯಲ್ಲಿ ಒಳಚರಂಡಿಯ ವ್ಯವಸ್ಥೆಯನ್ನು ಫಿಟ್ ಮಾಡುವ ಮೂಲಕ ಮಾಡಬೇಕೆಂದು ಇತ್ತು. ಅದರಂತೆ ಮಾಡಿದ್ದೇವೆ, ವಿಶೇಷವಾಗಿ ಕೊಳಚೆ ನಿರ್ಮೂಲನೆ ಯೋಜನೆಯನ್ನು ಮಾಡಿಲ್ಲ. ಮೂಲ ಯೋಜನೆಯಂತೆ ಮಾಡಲಾಗಿದೆ. ಮಾನ್ಯ ಸದಸ್ಯರು ನೀಡಿರುವ ಸಲಹೆಯನ್ನು ಪರಿಗಣಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ಇವರ ಉತ್ತರವನ್ನು ನಾನು ಒಪ್ಪುವುದೇ ಇಲ್ಲ. ಅಲ್ಲಿ ಏಳು ಕೊಳವೆ ಬಾವಿಗಳು ಇದೆ. ಅದರಲ್ಲಿ ಸುಮಾರು ಒಂದು ಇಲ್ಲವೆ ಒಂದೂವರೆ ಇಂಚು ನೀರು ಬರುತ್ತದೆ. ಅಲ್ಲಿನ ನಾಗರೀಕರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ನಗರಸಭೆಯ ವತಿಯಿಂದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಯಗಚಿ ಜಲಾಶಯದಿಂದ ಕುಡಿಯುವ ನೀರನ್ನು ತರುವ ಉದ್ದೇಶವಿದೆ. ಗೃಹ ಮಂಡಳಿಯ ವತಿಯಿಂದ ನಿರ್ಮಾಣವಾಗಿರುವ ಈ ಮನೆಗಳಿಗೆ ತಮ್ಮ ಮಂಡಳಿಯಿಂದ ನೀರನ್ನು ಒದಗಿಸುವ ಬಗ್ಗೆ ಚಿಂತನೆ ಮಾಡಿದ್ದೀರಾ?

ಶ್ರೀ ಸಿ.ಎಂ. ಉದಾಸಿ :— ಮಾನ್ಯ ಅಧ್ಯಕ್ಷರೆ, ಬೇರೆ ಯೋಜನೆಯ ಅಡಿಯಲ್ಲಿ ಇದು ಬರುವುದಾಗಿದ್ದರೆ ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡುತ್ತೇವೆ. ಮೂಲ ಯೋಜನೆಯಲ್ಲಿ ಯಾವ ರೀತಿ ಇದೆಯೋ ಅದರಂತೆ ಈಗ ಮಾಡಲಾಗಿದೆ. ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರು ಇಲ್ಲದಿರುವುದರಿಂದಲೇ ಪುರಸಭೆಯ ವತಿಯಿಂದ ಯಗಚಿ ಜಲಾಶಯದಿಂದ ನೀರನ್ನು ತರುವ ಕಾರ್ಯಕ್ರಮ ಹಮ್ಮಿಕೊಂಡಿರುವುದು. ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಇದರ ಬಗ್ಗೆ ಗೃಹ ಮಂಡಳಿಯ ಆಯುಕ್ತರ ಗಮನಕ್ಕೆ ತಂದಿದ್ದೇನೆ, ಅವರು ಸಹಕಾರವನ್ನೂ ಸಹ ಕೊಟ್ಟಿದ್ದಾರೆ. ಆದರೆ ಸರ್ಕಾರದ ವತಿಯಿಂದ ತಾವು ನನ್ನ ರಕ್ಷಣೆಗೆ ಬರಬೇಕು. ಅಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗೆ ಹಾಹಾಕಾರವಿದೆ. ನಾವು ನೀರನ್ನು ಒದಗಿಸಿಕೊಟ್ಟಿದ್ದೇವೆಂದು ಇವರು ಹೇಳಿಬಿಟ್ಟರೆ ನಾವು ಸುಮ್ಮನೆ ಇರಲು ಆಗುತ್ತದೆಯೇ? ನಾನು ಅಲ್ಲಿನ ನಾಗರೀಕರ ಜೊತೆ ಮೂರು ಸಲ ಸಭೆ ಮಾಡಿದ್ದೇನೆ. ಅಲ್ಲಿರುವ ಸಮಸ್ಯೆಯ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದೇವೆ. ತುರ್ತಾಗಿ ಇದರ ಬಗ್ಗೆ ಏನು ಮಾಡುತ್ತೇವೆಂದು ಹೇಳದೆ ಇದರ ಬಗ್ಗೆ ಆಲೋಚನೆ ಮಾಡುತ್ತೇನೆಂದರೆ ಹೇಗೆ? ಅಷ್ಟು ಹೊತ್ತಿಗೆ ನಾನು ಮತ್ತು ಆ ಕ್ಷೇತ್ರದಲ್ಲಿರುವ ಜನರು ಸತ್ತು ಹೋಗಿರುತ್ತೇವೆ. ಯಗಚಿ ಜಲಾಶಯದಿಂದ ನೀರನ್ನು ತರುವ ಬಗ್ಗೆ ಇವರೇನಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೇ?

ಅಧ್ಯಕ್ಷರು :— ತಾವೂ ಸಚಿವರಾಗಿ ಕೆಲಸ ಮಾಡಿದ್ದೀರಿ. ಇಲ್ಲಿಂದ ಈಗಲೇ ಮಾಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. ತಾವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ.

ಶ್ರೀ ಸಿ. ಆರ್.ಸಗೀರ್ ಅಹಮದ್ :— ಅವರ ಖಾತೆಯೇ ಬೇರೆ, ಅವರಿಗೆ ಉತ್ತರಕೊಡಲು ಅವಕಾಶ ಕೊಟ್ಟುಬಿಟ್ಟಿದ್ದೀರಿ.

ಅಧ್ಯಕ್ಷರು :— ಅವೆಲ್ಲಾ ಮಾಡಬೇಕಾಗುತ್ತದೆ. ಸಂಬಂಧಪಟ್ಟ ಮಂತ್ರಿಗಳಿಗೆ ಏನಾದರೂ ತೊಂದರೆ ಇದ್ದಾಗ ಅವರ ಪರವಾಗಿ ಇವರಿಗೆ ಜವಾಬ್ದಾರಿ ಒಪ್ಪಿಸಿರುತ್ತಾರೆ. ನಿನ್ನೆ ಕಾಟ್ಟೆರವರ ಪ್ರಶ್ನೆಯನ್ನು ಬೆಲ್ಲದ್‌ರವರು ಕೇಳಿದರು. ಆ ರೀತಿ ಕೇಳಲು ಬರೆದುಕೊಟ್ಟು ಹೋಗಿದ್ದರು. ಇವೆಲ್ಲಾ ವ್ಯವಸ್ಥೆಯಲ್ಲಿ ಇರತಕ್ಕದ್ದೆ. ಅವರು ಇದರ ಬಗ್ಗೆ ಸಂಬಂಧಪಟ್ಟ ಸಚಿವರ ಜೊತೆ ಮಾತನಾಡುತ್ತಾರೆ. ಇದರ ಬಗ್ಗೆ ಆಲೋಚನೆ ಮಾಡುತ್ತಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೇ, ಆಲೋಚನೆ ಮಾಡುವುದಕ್ಕೆ ಸಮಯ ಎಲ್ಲಿದೆ? ಇನ್ನು ಐದಾರು ತಿಂಗಳುಗಳಲ್ಲಿ ಇವರು ಏನು ಆಲೋಚನೆ ಮಾಡುತ್ತಾರೆ?

ಅಧ್ಯಕ್ಷರು :— ಇನ್ನು ಐದಾರು ತಿಂಗಳುಗಳಲ್ಲಿ ನಿಮಗೆ ತೊಂದರೆಯಾಗದಂತೆ, ನಿಮ್ಮ ಭವಿಷ್ಯಕ್ಕೆ ಏನು ಆಗಬೇಕೋ ಅಂತಹ ಅನುಕೂಲ ಮಾಡಿ ಕೊಡುತ್ತಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಏನೋ ಮಾನ್ಯ ಅಧ್ಯಕ್ಷರಾದ ತಮ್ಮ ಆರ್ಶೀವಾದದ ಮೇರೆಗೆ ಏನಾದರೂ ನನ್ನ ಜೀವ ಉಳಿಯಬೇಕಷ್ಟೇ.

ದ. ಕನ್ನಡ ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆ ಎಂದು ಘೋಷಣೆ.

187(1292) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯನ್ನು ತೋಟಗಾರಿಕೆ ಜಿಲ್ಲೆ ಎಂದು ಸಹಕಾರ ಘೋಷಿಲಾಗುವುದೇ;

ಆ) ಹಾಗಿದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೋಟಗಾರಿಕಾ ಅಭಿವೃದ್ಧಿಗೆ ಸರಕಾರ ಕೈಗೊಂಡ ಕ್ರಮಗಳೇನು?

ಇ) ರಾಜ್ಯದಲ್ಲಿ ತೋಟಗಾರಿಕಾ ಉತ್ಪನ್ನಗಳಿಗೆ ಯೋಗ್ಯ ಮಾರಾಟ ಬೆಲೆ ಸಿಗುವಂತೆ ಮಾಡಲು ಸರಕಾರ ಕೈಗೊಂಡ ಕ್ರಮಗಳೇನು?

ಈ) ರಾಜ್ಯದ ತೋಟಗಾರಿಕಾ ಉತ್ಪನ್ನಗಳ ರಫ್ತು ಮಾಡಲು ಕೈಗೊಂಡ ಕ್ರಮಗಳೇನು ಈಗಾಗಲೇ ಎಷ್ಟು ಮೊತ್ತದ ರಫ್ತು ಯಾವ ದೇಶಗಳಿಗೆ ಮಾಡಲಾಗಿದೆ?